## ಕಳೆದ ಸಂಚಿಕೆಯಲ್ಲಿ



ಬೆಂಗಳೂರಿನಲ್ಲಿನ ವಾಸ ನ್ಯಾನ್ಸಿಗೆ ಸಂತೋಷಕರವಾಗಿ ಪರಿಣಮಿಸಿತು. ಆದರೆ, ಕಾರು ತೊಳೆಯುವ ಹುಡುಗನ ಶ್ರಮಕ್ಕೆ ಹೆಚ್ಚಿನ ದುಡ್ಡು ಕೊಡಲು ಅಪಾರ್ಟ್‌ಮೆಂಟ್‌ನ ಶ್ರೀಮಂತ ಕುಟುಂಬಗಳು ನಿರಾಕರಿಸಿದ್ದು ನ್ಯಾನ್ಸಿಗೆ ಆಶ್ಚರ್ಯ ಹಾಗೂ ಬೇಸರ ಉಂಟುಮಾಡಿತು. ತನ್ನ ಕುಟುಂಬದೊಂದಿಗೆ ಕೇರಳ ಪ್ರವಾಸ ಕೈಗೊಂಡ ನ್ಯಾನ್ಸಿಗೆ ತವರಿನಲ್ಲಿನ ಬದಲಾದ ಚಿತ್ರಗಳು ವಿಶಿಷ್ಟ ಅನುಭವ ಉಂಟುಮಾಡಿದವು. ಎಣ್ಣೆ–ಸೀಗೆಕಾಯಿಯಂತಿದ್ದ ಕುಂಜಮ್ಮಾ ಮತ್ತು ಚೆರಿಯಮ್ಮಾ ವೃದ್ಧಾಪ್ಯದಲ್ಲಿ ತಮ್ಮ ಒಂಟಿತನವನ್ನು ನೀಗಿಕೊಳ್ಳಲು ಆಪ್ತರಾಗಿರುವುದನ್ನು ನೋಡಿ ಅವಳಿಗೆ ಅಚ್ಚರಿಯೂ ಆನಂದವೂ ಆಯಿತು. ಕುಂಜುಮ್ಮಾಳ ಭೇಟಿ ಬಾಲ್ಯ–ತಾರುಣ್ಯದ ನೆನಪುಗಳನ್ನು ನವೀಕರಿಸಿತು. ಭಾರತದಲ್ಲಿ ಕಳೆಯುವ ಸಮಯದಲ್ಲಿ ಏನನ್ನಾದರೂ ಕಲಿಯಬೇಕು ಎಂದು ನ್ಯಾನ್ಸಿ ಬಯಸಿದಳು. ಆದರೆ, ಹಣ ಖರ್ಚು ಮಾಡಲು ಮಾರ್ಕೋ ಒಪ್ಪಲಿಲ್ಲ. ಕೊನೆಗೆ, ತನ್ನ ತವರಿನಿಂದ ಬಂದ ಹಣ ಬಳಸಿಕೊಂಡ ನ್ಯಾನ್ಸಿ ಮಸಾಜ್ ಥೆರಪಿ ಕಲಿಯತೊಡಗಿದಳು. ಅವಳ ಬದುಕಿನ ಹೊಸ ಅಧ್ಯಾಯ ಆರಂಭವಾಗಿತ್ತು.

ಏನು ಮಾಡಲಿ? ಆ ಶಾಲೆಯನ್ನು ಮರೆತು, ಬೇರೆಡೆ ನೌಕರಿಗೆ ಪ್ರಯತ್ನಿಸುವುದಾಗಿ ಮನಸ್ಸಿಗೆ ತಿಳಿ ಹೇಳಿಕೊಂಡೆ. ಆದರೆ 'ಡ್ಯಾನಿಶ್ ನೌಕರಿ ಮಾರ್ಕೆಟ್'ನಲ್ಲಿ ಕಾಲೂರಲು ಉತ್ತಮ ಡ್ಯಾನಿಶ್ ಭಾಷೆ ಬರಬೇಕು. ನಾನು ಕಲಿತ ಡ್ಯಾನಿಶ್, ನನ್ನ ಅಮೆರಿಕ ಮತ್ತು ಭಾರತ ಪ್ರವಾಸದ ವೇಳೆಯಲ್ಲಿ ಮರೆತುಹೋಗಿತ್ತು. ಭಾಷೆಯನ್ನು ನಾವು ಪ್ರಯೋಗಿಸದಿದ್ದರೆ, ಅದು ಕ್ರಮೇಣ ಮರೆತುಹೋಗುತ್ತದೆ; ಇದು ಭಾಷೆಯೊಂದಿಗಿನ ನಂಟು.

ಸರ್ಕಾರಿ ನಿಯಮದ ಅಡಿಯಲ್ಲಿ ಇಮಿಗ್ರೆಂಟ್ಸ್‌ಗೆ ಐದು ವರ್ಷಗಳವರೆಗೆ ಡ್ಯಾನಿಶ್ ಭಾಷೆಯನ್ನು ಶುಲ್ಕವಿಲ್ಲದೆ ಕಲಿಯಬಹುದಿತ್ತು. ಆದರೆ ನಾನು ಇದರ ಲಾಭವನ್ನು ಉಚಿತ ರೀತಿಯಲ್ಲಿ ಪಡೆಯದಾದೆ. ಮನಸ್ಸಿಲ್ಲದ ಮನಸ್ಸಿನಿಂದ ಡ್ಯಾನಿಶ್ ಕ್ಲಾಸ್‌ಗೆ ದಾಖಲಾಗುತ್ತಿದ್ದೆ, ಕೋರ್ಸ್ ಮುಗಿಸದೆ ನಡುವೆಯೇ ಬಿಡುತ್ತಿದ್ದೆ. ಜೀವನದ ಏರಿಳಿತಗಳು, ನನ್ನನ್ನು ಹೆಚ್ಚು ವ್ಯಸ್ತತೆ ಮತ್ತು ಒತ್ತಡದಲ್ಲಿಟ್ಟವು; ನಾನು ಯೋಚಿಸಲೂ ಅಸಮರ್ಥಳಾಗಿದ್ದೆ. ಹೀಗಾಗಿ ಅಲ್ಲಿ ನನಗೆ ಶುಲ್ಕರಹಿತ ಪ್ರವೇಶ ಲಭಿಸಲಿಲ್ಲ. ಒಂದು ಸೆಮಿಸ್ಟರ್ ಶುಲ್ಕ ಒಂಬತ್ತು ಸಾವಿರ ಕ್ರೋನರ್ ಆಗಿದ್ದು, ಒಂದು ಸೆಮಿಸ್ಟರ್ ಮೂರು ತಿಂಗಳ ಅವಧಿಯದಾಗಿತ್ತು. ಶ್ರಮವಹಿಸಿ ನಾಲ್ಕು ಸೆಮಿಸ್ಟರ್‌ಗಳಲ್ಲಿ ನನ್ನ ಕೋರ್ಸ್ ಮುಗಿಸಿಕೊಳ್ಳುವುದಾಗಿ ಯೋಚಿಸಿದೆ, ಅಂದರೆ ನನಗೆ ಮೂವತ್ತಾರು ಸಾವಿರ ಕ್ರೋನರ್ ಬೇಕಿತ್ತು. ಮಾರ್ಕೋನಲ್ಲಿ ಮೂವತ್ತಾರು ಸಾವಿರ ಕ್ರೋನರ್ ಸಾಲವನ್ನು ಯಾಚಿಸಿದೆ, ನೌಕರಿ ಲಭಿಸುತ್ತಲೇ ಬಡ್ಡಿ ಸಮೇತ ತೀರಿಸುವುದಾಗಿ ವಿನಂತಿಸಿಕೊಂಡೆ. ಅವನು ಇಷ್ಟವಿಲ್ಲದೆಯೇ ಇದಕ್ಕೊಪ್ಪಿಕೊಂಡ.

ದಿನಗಳು ಕಳೆಯುತ್ತಿದ್ದವು. ನಾನು 47ಕ್ಕೆ ಕಾಲಿಟ್ಟಿದ್ದೆ. ನನ್ನ ದೇಹದಲ್ಲಿ ಕೊಬ್ಬು ಹೆಚ್ಚಾಗಬಾರದೆಂದು ತುಂಬಾ ಪ್ರಯತ್ನಿಸುತ್ತಿದ್ದೆ. ಆದರೆ ವೃದ್ಧಾಪ್ಯವನ್ನು ಒಂದು ಮಿತಿಯವರೆಗೆ ತಡೆಯಬಹುದಷ್ಟೆ. ವಯಸ್ಸು ನನ್ನ ಮೇಲೆ ಆಕ್ರಮಣವೆಸಗುತ್ತಿತ್ತು. ಚರ್ಮ ಶಿಥಿಲವಾಗುತ್ತಿತ್ತು, ಕೂದಲುಗಳು ಬಿಳುಪಾಗುತ್ತಿದ್ದವು. ಮಾರ್ಕೋ ನನ್ನನ್ನು ಅವಹೇಳನ ಮಾಡುತ್ತಾ ಗದರಿಸುತ್ತಿದ್ದ, 'ನೀನು ನನ್ನ ಸಮೀಪಕ್ಕೆ ಬಂದಾಗ ವಿಚಿತ್ರವಾಗಿ ತೋರುತ್ತದೆ. ನೀನು ದಢೂತಿಯಾಗುತ್ತಿದ್ದೀಯ. ಜಿಮ್‌ಗೆ ಹೋಗಿ, ನಿನ್ನ ಫಿಗರನ್ನು ಸರಿ ಮಾಡಿಕೋ.'

'ಓ.ಕೆ. ಕ್ಯೂಟೀಪಾಯಿ!' ನಾನು ಅವನ ಈ ಮಾತಿಗೆ ನಗುತ್ತಿದ್ದೆ. ಅವನು ನನಗಿಂತ ಆರು ವರ್ಷ ಚಿಕ್ಕವನಾಗಿದ್ದ, ಈಚೆಗೆ ನನ್ನ ಬಗ್ಗೆ ಉದಾಸೀನತೆಯನ್ನು ತೋರುತ್ತಿದ್ದ. ಆದರೆ ವೃದ್ಧೆಯಾಗುವುದು ನನ್ನ ತಪ್ಪೆ? ಬೆಳಗಾಗುವುದರಲ್ಲಿ ಎಲ್ಲರೂ ವೃದ್ಧರಾಗುತ್ತಾರೆ. ಆದರೆ ಇಂಥ ವಿಷಯಗಳನ್ನು ಯಾರಲ್ಲಿ ಪ್ರಸ್ತಾಪಿಸಲಿ? ಪಾಲ್, ಇಷ್ಟು ದಿನಗಳಿಂದ ಸಂಚಿತವಾಗಿದ್ದ ವೇದನೆ, ಇಂದು ಜಳ–ಜಳವಾಗಿ ನಿಮ್ಮ ಪಾದಗಳಲ್ಲಿ ಅರ್ಘ್ಯವಾಗಿ ಹರಿಯುತ್ತಿದೆ. ವಾಸ್ತವಿಕತೆ ಎಂದರೆ, ಇಷ್ಟೆಲ್ಲವನ್ನು ಹೊರತುಪಡಿಸಿಯೂ ನಾನು ಮಾರ್ಕೋನನ್ನು ಪ್ರೀತಿಸುತ್ತಿದ್ದೆ. ಆದರೆ ಆ ಪ್ರೀತಿ ಸಾಕಾಗುತ್ತಿರಲಿಲ್ಲ. ಪ್ರೀತಿಯಿಂದ ಎಲ್ಲವನ್ನೂ ಗೆಲ್ಲಲಾಗದು ಎಂಬುದು ನನ್ನ ಅನುಭವಕ್ಕೆ ಬಂತು.

ನಾನು ಅವನೊಳಗೆ ಚಿಗುರುತ್ತಿದ್ದ ಶಿಥಿಲತೆ ಮತ್ತು ಒರಟುತನವನ್ನು ಸಹಿಸಿಕೊಳ್ಳುತ್ತಿದ್ದೆ. ಆದರೆ ಅವನು ನನ್ನನ್ನು ನಯಾಪೈಸೆಗೂ ಒದ್ದಾಡಿಸುತ್ತಿದ್ದ, ಈ ಸಮಸ್ಯೆಗೆ ಏನು ಮಾಡಲಿ? ಮನೆಯ ಬಿಲ್‌ಗಳ ಹಣ ಮತ್ತು ದಿನನಿತ್ಯದ ಖರ್ಚನ್ನು ಅವನು ಭರಿಸಿ, ನನಗೆ ಕೃಪೆ ತೋರುತ್ತಿದ್ದಾನೆ ಎಂದು ಅವನು ಯೋಚಿಸುತ್ತಿದ್ದ. ಶ್ಯಾಂಪೂ, ಲಿಪ್‌ಸ್ಟಿಕ್ ಕೊಳ್ಳಲು ಅಥವಾ ಮೊಬೈಲ್ ಚಾರ್ಜ್ ಮಾಡಿಸಲು, ಹೇರ್ ಕಟಿಂಗ್ಸ್ ಮಾಡಿಸಿಕೊಳ್ಳಲು ನನ್ನ ಬ್ಯಾಂಕ್ ಅಕೌಂಟಿನಿಂದ ಹಣವನ್ನು ತೆಗೆಯಬೇಕಿತ್ತು. ನೂರು ಕ್ರೋನರ್ ಯಾಚಿಸಿದರೂ, ವಾದ–ತಕರಾರು ಮಾಡುತ್ತಿದ್ದ. ನಾನು ದೂರದ ಸ್ಥಳಗಳಿಗೆ ಫೋನ್ ಮಾಡಲು ಯೋಚಿಸಬೇಕಿತ್ತು. ನನ್ನ ಸಹೋದರ–ಸಹೋದರಿ ಮತ್ತು ಮಗ ಜೋಶ್ ನನಗೆ ಖುದ್ದು ಫೋನ್ ಮಾಡುತ್ತಿದ್ದರು ಅಥವಾ ನಾನು ಅವರಿಗೆ ಫೋನ್ ಮಾಡಲು ಬಯಸಿದಾಗ, ಅವರಿಗೆ ಮಿಸ್ಡ್ ಕಾಲ್ ಮಾಡುತ್ತಿದ್ದೆ. ನನ್ನ ಪರಿಸ್ಥಿತಿ ತುಂಬಾ ದಯನೀಯವಾಯಿತು. ಸರ್ಕಾರದಿಂದ ನನಗೆ ನೀಲ್‌ನ 'ಚೈಲ್ಡ್ ಅಲೋಯನ್ಸ್' (ಮಕ್ಕಳ ಭತ್ಯೆ) ಲಭಿಸುತ್ತಿತ್ತು, ಇದು ನನಗೆ ಸ್ವಲ್ಪ ಅನುಕೂಲವಾಗುತ್ತಿತ್ತು. ಆದರೆ ಮಾರ್ಕೋ ಇದರ ಬಗ್ಗೆಯೂ ಲೆಕ್ಕ ಕೇಳುತ್ತಿದ್ದ. ನನ್ನ ಬಗ್ಗೆ ಮಿಥ್ಯಾರೋಪ ಮಾಡುತ್ತಾ, ನನ್ನ ಮಗನ ಚೈಲ್ಡ್ ಅಲೋಯನ್ಸನ್ನು ನಾನು ತಿನ್ನುತ್ತಿದ್ದೇನೆ ಎಂದು ನಿಂದಿಸುತ್ತಿದ್ದ.

ನನ್ನ ಶುಲ್ಕವನ್ನು ಮಾರ್ಕೋ ಭರಿಸುವುದಾಗಿ ಒಪ್ಪಿದಾಗಲೇ ನಾನು ಡ್ಯಾನಿಶ್ ಕ್ಲಾಸಿಗೆ ಸೇರಿದ್ದೆ. ತುಂಬಾ ಮನಸ್ಸಿಟ್ಟು ಕಲಿಯುತ್ತಿದ್ದೆ. ಈ ಬಾರಿ ಮೈಬಗ್ಗಿಸಿ ಓದಿ, ಡ್ಯಾನಿಶ್ ಪರೀಕ್ಷೆಗಳನ್ನು ಪಾಸು ಮಾಡಿ ಸರ್ಟಿಫಿಕೇಟ್ ತೆಗೆದುಕೊಳ್ಳುತ್ತೇನೆ ಎಂದು ತೀರ್ಮಾನಿಸಿದ್ದೆ. ನನ್ನ ಪತಿ ನನ್ನ ಫೀಸ್ ಕಟ್ಟುತ್ತಿದ್ದಾನೆ ಎಂದು ನಾನು ನಿಶ್ಚಿಂತೆಯಿಂದಿದ್ದೆ. ಆದರೆ ಒಂದು ದಿನ ನಾನು ಶಾಲೆಗೆ ಹೋದಾಗ ಡ್ಯಾನಿಶ್ ಅಧ್ಯಾಪಕಿ ಹೇಳಿದರು, 'ನಿಮ್ಮನ್ನು ಲೀಡರ್ ಅನ್ನೇತಾ ತಮ್ಮ ಚೇಂಬರಿಗೆ ಕರೆಯುತ್ತಿದ್ದಾರೆ.'

ನಾನು ಅನ್ನೇತಾರ ಚೇಂಬರ್‌ಗೆ ಹೋದೆ. ಅವರು ನನ್ನ ಫೀಸ್ ಜಮಾ ಆಗುತ್ತಿಲ್ಲವೆಂದರು.

ನಾನು ಆಶ್ಚರ್ಯದಿಂದ ಹೇಳಿದೆ, 'ನನ್ನ ಪತಿ ಫೀಸ್ ಕಟ್ಟುತ್ತಿದ್ದಾರೆ.'

'ಇಲ್ಲ, ಜಮಾ ಆಗಿಲ್ಲ.'

ಅಂದು ಇಡೀ ದಿನ ಕ್ಲಾಸ್‌ನ ಪಾಠಗಳು ರುಚಿಸಲಿಲ್ಲ. ಬೇಸರದಿಂದ ಕೂತಿದ್ದೆ. ಮನೆಗೆ ಬಂದು ಮಾರ್ಕೋನನ್ನು ಈ ಬಗ್ಗೆ ಕೇಳಿದೆ.

'ಮರೆತುಬಿಟ್ಟೆ' ಎಂದ ಅವನು.

'ಮಾರ್ಕೋ...! ಇದೇನು ಮಾಡಿದಿರಿ?'

'ಮರೆತೆ ಅಂತ ಹೇಳಿದೆನಲ್ಲಾ...' ಅವನು ಉತ್ತೇಜಿತನಾದ. ನಾನು ಮೌನ ವಹಿಸಿದೆ. ಅವನನ್ನು ಕೆರಳಿಸಲು ನಾನು ಬಯಸುತ್ತಿರಲಿಲ್ಲ. ನೀವು ಆದಷ್ಟು ಬೇಗ ಫೀಸ್ ಕಟ್ಟಿ ಎಂದು ಅವನಲ್ಲಿ ಪ್ರಾರ್ಥಿಸಿದೆ. ಅವನು ಒಪ್ಪಿದ. ಆದರೆ ನಾನು ಅನೇಕ ಬಾರಿ ನೆನಪಿಸಿದ್ದಾಗ್ಯೂ, ಫೀಸ್ ಕಟ್ಟಲಿಲ್ಲ. ನಾನು ತುಂಬಾ ಅವಮಾನಿತಳಾಗಿ ಆ ಲಾಂಗ್ವೇಜ್ ಸ್ಕೂಲನ್ನು ಬಿಡಬೇಕಾಯಿತು. ನೀವು ಹೀಗೇಕೆ ಮಾಡಿದಿರಿ ಎಂದು ಮಾರ್ಕೋನನ್ನು ಕೇಳಿದೆ.

'ನಾನು ನಿನ್ನ ಡ್ಯಾನಿಶ್ ಕಲಿಕೆಯ ಫೀಸನ್ನು ಜಮಾ ಮಾಡಲಾರೆ, ನೀನು 1995ರಲ್ಲಿಯೇ ಡೆನ್ಮಾರ್ಕ್‌ಗೆ ಬಂದಿದ್ದೆ. ಹದಿನೈದು ವರ್ಷಗಳಿಂದ ಇಲ್ಲಿದ್ದೀಯ. ಆಗ ಏಕೆ ಡ್ಯಾನಿಶ್ ಕಲಿಯಲಿಲ್ಲ? ಡ್ಯಾನಿಶ್ ನಾಗರಿಕತೆಯನ್ನು ಏಕೆ ಪಡೆಯಲಿಲ್ಲ? ಏಕೆ?' ಎಂದು ನನ್ನನ್ನು ಹಳಿಯುತ್ತಿದ್ದ.

ಏಕೆ...? ಏಕೆ...?

ನಾನು ನಿರಾಶಳಾದೆ. ಪತಿಯ ಮೇಲೆ ನಾನು ಆರ್ಥಿಕವಾಗಿ ನಿರ್ಭರಳಾಗಿರಲು ಸಾಧ್ಯವಿಲ್ಲವೇ? ಪತಿಯ ಸಂರಕ್ಷಣೆಯಲ್ಲಿರಲು ಸಾಧ್ಯವಿಲ್ಲವೇ?